| | |
|---|---|
| <u>ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಮ್.ಎಫ್.ಸಿ ಜಮಖಂಡಿ.</u> | |
| ಸಿ.ಸಿ.ನಂ.**34/2022** | |
| | ಚಾಸಾ-**8** |
| | ಪ್ರಾಸಾ-**9** |
| ಸಾಕ್ಷಿದಾರರ ಹೆಸರು | ದಯಾನಂದ ಗುರವ |
| ತಂದೆಯ ಹೆಸರು | ಮಲ್ಲಪ್ಪ |
| ವಯಸ್ಸು | **32** ವರ್ಷ |
| ಉದ್ಯೋಗ | ಚಾಲಕ |
| ವಾಸಸ್ಥಳ | ಹುನ್ನೂರು ಗ್ರಾಮ, ತಾಃ ಜಮಖಂಡಿ |

<u>ದಿನಾಂಕ **17.02.2026** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.</u>

<u>ಮುಖ್ಯ ವಿಚಾರಣೆಃ- ಸ.ಸ.ಅ ರವರಿಂದಃ</u>

1. ನನಗೆ ಪ್ರಸ್ತುತ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ. ನಾನು ಪೋಲಿಸರ ಮುಂದೆ ಹೇಳಿಕೆ ನೀಡಿರುವುದಿಲ್ಲ.

**(**ಈ ಹಂತದಲ್ಲಿ ಸ.ಸ.ಅ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರುತ್ತಾರೆ. ಸದರಿ ಸಾಕ್ಷಿಯ ಸಾಕ್ಷ್ಯವನ್ನು ಪರಿಗಣಿಸಿ ಸ.ಸ.ಅ. ರವರಿಗೆ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.**)**

<u>ಪಾಟೀ ಸವಾಲುಃ- ಸ.ಸ.ಅ. ರವರಿಂದಃ-</u>

1. ದಿನಾಂಕ 17.07.2021 ರಂದು ರಾತ್ರಿ 10.30 ಗಂಟೆಗೆ ನ್ಯಾಯಾಲಯದ ಮುಂದಿರುವ ಆರೋಪಿತರೆಲ್ಲರೂ ಚಾಸಾ-1 ರವರ ಮನೆಗೆ ಹೋಗಿ, ಚಾಸಾ-1 ಮತ್ತು 4 ರವರೊಂದಿಗೆ ಜಗಳ ಮಾಡಿ, ಅವಾಚ್ಯ ಶಬ್ದಗಳಿಂದ ಬೈದು, ಹೊಡೆಬಡೆ ಮಾಡಿ, ಜೀವ ಬೆದರಿಕೆ ಹಾಕಿರುತ್ತಾರೆ ಎಂದರೆ ಸರಿಯಲ್ಲ. ಜಗಳ ಬಿಡಿಸಲು ಬಂದ ಚಾಸಾ-3 ಶಕುಂತಲಾ ಇವರಿಗೆ ಆರೋಪಿತರು ಹೊಡಬಡೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿತರು ಚಾಸಾ-4 ರವರನ್ನು ಕಂಬಕ್ಕೆ ಕಟ್ಟಿ ಹೊಡೆಬಡೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ನಾನು, ಚಾಸಾ-5 ರಿಂದ 7 ರವರು ಸೇರಿ ಜಗಳ ಬಿಡಿಸಿರುತ್ತೇವೆ ಎಂದರೆ ಸರಿಯಲ್ಲ. ಘಟನೆಯ ಕುರಿತು ನಾನು ಈಗ ಓದಿ ಹೇಳಿರುವಂತೆ ಪೋಲಿಸರ ಮುಂದೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿಪಿ-18 ಎಂದು ಗುರುತಿಸಲಾಯಿತು. ಸದರಿ ಘಟನೆಯನ್ನು ನಾನು ನೋಡಿದ್ದರೂ ಸಹಿತ, ಈಗ ಆರೋಪಿತರಿಗೆ ಸಹಾಯ ಮಾಡಬೇಕೆಂಬ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ ಆರೋಪಿತರ ಪರ ಶ್ರೀ.ಎನ್ ಬಿ ಜಿ ವಕೀಲರಿಂದಃ-</u>

(ಆರೋಪಿತರ ಪರ ವಕೀಲರು ಪಾಟೀ ಸವಾಲು ಇರುವುದಿಲ್ಲ ಎಂದು ಹೇಳುತ್ತಾರೆ.)

<u>ಮರುವಿಚಾರಣೆಃ ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೆ. ಸರಿ ಅದೆ.

RAJASHEKHAR

Digitally signed by RAJASHEKHAR
Date: 2026.02.17 18:38:11 +0530

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ಹಾಗೂ ಜೆ.ಎಮ್.ಎಫ್.ಸಿ. ಜಮಖಂಡಿ.

| ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಮ್.ಎಫ್.ಸಿ ಜಮಖಂಡಿ. | |
|---|---|
| ಸಿ.ಸಿ.ನಂ.**34/2022** | |
| ಚಾಸಾ-**11** | |
| ಪ್ರಾಸಾ-**10** | |
| ಸಾಕ್ಷಿದಾರರ ಹೆಸರು | ಸುಭಾಸಚಂದ್ರ ಕೋಟ್ಯಾಳ |
| ತಂದೆಯ ಹೆಸರು | ಗುರುಲಿಂಗಪ್ಪ |
| ವಯಸ್ಸು | **54** ವರ್ಷ |
| ಉದ್ಯೋಗ | ಎಎಸ್ಐ**,** ನಗರ ಪೋಲಿಸ್ ಠಾಣೆ ಜಮಖಂಡಿ |
| ವಾಸಸ್ಥಳ | ಜಮಖಂಡಿ |

ದಿನಾಂಕ **17.02.2026** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಮುಖ್ಯ ವಿಚಾರಣೆಃ- ಸ.ಸ.ಅ ರವರಿಂದಃ-

ನಾನು 2015 ರಿಂದ 2022 ರವರೆಗೆ ಜಮಖಂಡಿ ಗ್ರಾಮೀಣ ಪೋಲಿಸ್ ಠಾಣೆಯಲ್ಲಿ ಮುಖ್ಯಪೇದೆ ಎಂದು ಕರ್ತವ್ಯ ನಿರ್ವಹಿಸಿರುತ್ತೇನೆ.

1. ದಿನಾಂಕ 18.07.2021 ರಂದು ಬೆಳಗಿನಜಾವ 3.15 ಗಂಟೆಗೆ ನಾನು ಠಾಣೆಯ ಕರ್ತವ್ಯದಲ್ಲಿದ್ದಾಗ, ಚಾಸಾ-1 ರವರು ಪೋಲಿಸ್ ಠಾಣೆಗೆ ಬಂದು ದಸ್ತೂರ್ ಲಿಖಿತ ದೂರು ಸಲ್ಲಿಸಿರುತ್ತಾರೆ. ಸದರಿ ದೂರಿನ ಆಧಾರದ ಮೇಲೆ ನಾನು ಅಪರಾಧ ಸಂಖ್ಯೆಃ 85/2021 ಎಂದು ಪ್ರಕರಣ ದಾಖಲಿಸಿಕೊಂಡು, ಪ್ರಥಮ ವರ್ತಮಾನ ವರದಿಯನ್ನು ಸಿಪಿಸಿ 616 ರವರ ಮೂಲಕ ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಅದೇ ದಿನ ಪ್ರಥಮ ವರ್ತಮಾನ ವರದಿಯನ್ನು ಇಮೇಲ್ ಮೂಲಕ ಮೇಲಾಧಿಕಾರಿಗಳಿಗೆ ಸಲ್ಲಿಸಿರುತ್ತೇನೆ.

2. ಅದೇ ದಿನ 16.45 ರಿಂದ 17.45 ಗಂಟೆಯವರೆಗೆ ಚಾಸಾ-1 ರವರು ತೋರಿಸಿದ ಘಟನಾ ಸ್ಥಳದಲ್ಲಿ ಪಂಚರಾದ ಚಾಸಾ-2 ರವರ ಸಮಕ್ಷಮ ಸ್ಥಳ ಪಂಚನಾಮೆ ಮಾಡಿರುತ್ತೇನೆ. ಸ್ಥಳದಲ್ಲಿ ಹೆಣ್ಣು ಮಕ್ಕಳು ಧರಿಸುವ ಗಾಜಿನ ಬಳೆ ಚೂರುಗಳನ್ನು ಮತ್ತು ಒಂದು ನೂಲಿನ ಹಗ್ಗವನ್ನು ಪಂಚರ ಸಮಕ್ಷಮ ಜಪ್ತಿಪಡಿಸಿಕೊಂಡಿರುತ್ತೇನೆ. ಅದೇ ದಿನ ಮಾನ್ಯ ನ್ಯಾಯಾಲಯಕ್ಕೆ ಜಪ್ತಿಪಡಿಸಿದ ಸ್ವತ್ತುಗಳ ಕುರಿತಾದ ಪಿ.ಎಫ್ ಸಲ್ಲಿಸಿರುತ್ತೇನೆ. ಪಂಚನಾಮೆ ಕಾಲಕ್ಕೆ ಫೋಟೋಗಳನ್ನು ತೆಗೆಯಲಾಗಿರುತ್ತದೆ.

3. ಅದೇ ದಿನ ಚಾಸಾ-1 ರವರ ಪುರವಣಿ ಹೇಳಿಕೆ ಮತ್ತು ಚಾಸಾ-3 ರಿಂದ 8 ರವರ ಹೇಳಿಕೆಗಳನ್ನು ಪಡೆದಿರುತ್ತೇನೆ. ದಿನಾಂಕ 18.07.2021 ರಂದು ತನಿಖಾ ಪ್ರಕ್ರಿಯೇ ಫೋಟೋಗಳನ್ನು ತೆಗೆದಿರುವ ಚಾಸಾ-10 ರವರಿಂದ ಹೇಳಿಕೆ ಮತ್ತು ಪ್ರಮಾಣ ಪತ್ರ ಪಡೆದಿರುತ್ತೇನೆ. ದಿನಾಂಕ 19.07.2021 ರಂದು ಆರೋಪಿತರಿಗೆ ನೋಟೀಸ್ ನೀಡಿ ಪೋಲಿಸ್ ಠಾಣೆಗೆ ಕರೆಸಿ ವಿಚಾರಿಸಿರುತ್ತೇನೆ. ನಂತರ ದಸ್ತಗಿರಿ ನಿಯಮಾವಳಿಗಳನ್ನು ಪಾಲಿಸಿ ಮುಚ್ಚಳಿಕೆ

ಬರೆಸಿಕೊಂಡು ಬಿಡುಗಡೆ ಮಾಡಿರುತ್ತೇನೆ. ದಿನಾಂಕ 31.07.2021 ರಂದು ಚಾಸಾ-1 ಮತ್ತು 4 ರವರ ಗಾಯದ ಪ್ರಮಾಣ ಪತ್ರಗಳನ್ನು ವೈದ್ಯರಿಂದ ಪಡೆದಿರುತ್ತೇನೆ. ದಿನಾಂಕ 16.08.2021 ರಂದು ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಕೆಇಬಿ ಜಮಖಂಡಿ ಇವರಿಂದ ವಿದ್ಯುಚ್ಛಕ್ತಿ ಸರಬರಾಜು ಇದ್ದ ಬಗ್ಗೆ ಹೇಳಿಕೆ ಪಡೆದಿರುತ್ತೇನೆ. ದಿನಾಂಕ 19.08.2021 ರಂದು ಪಿ.ಡಿ.ಓ, ಗ್ರಾಮ ಪಂಚಾಯತ್, ಹುನ್ನೂರು ಇವರಿಂದ ಚಾಸಾ-1 ರವರ ಮನೆಯ ಕುರಿತಾದ ದಾಖಲೆಯನ್ನು ಪಡೆದಿರುತ್ತೇನೆ. ದಿನಾಂಕ 11.09.2021 ರಂದು ಚಾಸಾ-3 ರವರ ಗಾಯದ ಪ್ರಮಾಣ ಪತ್ರವನ್ನು ಪಡೆದಿರುತ್ತೇನೆ. ದಿನಾಂಕ 23.10.2021 ರಂದು ಚಾಸಾ-1 ಮತ್ತು 3 ರವರನ್ನು ಮಾನ್ಯ ನ್ಯಾಯಾಧೀಶರ ಮುಂದೆ ಡಬ್ಲ್ಯೂ.ಪಿ.ಸಿ.1478 ಮತ್ತು ಪಿಸಿ 909 ರವರ ಮೂಲಕ ಹಾಜರುಪಡಿಸಿ, ಮಾನ್ಯ ನ್ಯಾಯಾಧೀಶರು ದಂಡ ಪ್ರಕ್ರಿಯಾ ಸಂಹಿತೆ ಕಲಂ.164 ರ ಅಡಿಯಲ್ಲಿ ದಾಖಲಿಸಿಕೊಂಡ ಹೇಳಿಕೆಗಳನ್ನು ಪಡೆದಿರುತ್ತೇನೆ. ದಿನಾಂಕ 28.11.2021 ರಂದು ತನಿಖೆ ಪೂರ್ಣಗೊಳಿಸಿ, ಆರೋಪಿತರ ವಿರುದ್ಧ ದೋಷಾರೋಪಣಾ ಪಟ್ಟಿಯನ್ನು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ.

4. ಈಗ ಸಾಕ್ಷಿಯು ನಿಪಿ-1 ರ ಮೇಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿರುವುದರಿಂದ, ಸದರಿ ಸಹಿಯನ್ನು ನಿಪಿ-1(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ-2 ರಿಂದ 5 ಫೋಟೋಗಳನ್ನು ನೋಡಿ ಅವುಗಳು ಪಂಚನಾಮೆ ಕಾಲಕ್ಕೆ ತೆಗೆದ ಫೋಟೋಗಳಾಗಿರುತ್ತವೆ ಎಂದು ನುಡಿಯುತ್ತಾರೆ. ಸಾಕ್ಷಿಯು ನಿಪಿ-6 ರ ಮೇಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿರುವುದರಿಂದ, ಸದರಿ ಸಹಿಯನ್ನು ನಿಪಿ-6(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ-9 ಮತ್ತು 10 ಫೋಟೋಗಳನ್ನು ನೋಡಿ ಅವುಗಳು ಚಾಸಾ-4 ರವರ ಫೋಟೋಗಳಾಗಿರುತ್ತವೆ ಎಂದು ನುಡಿಯುತ್ತಾರೆ. ಸಾಕ್ಷಿಯು ನಿಪಿ-11 ರಿಂದ 13 ರ ಮೇಲಿರುವ ತನ್ನ ಸಹಿಗಳನ್ನು ನೋಡಿ ಗುರುತಿಸಿರುವುದರಿಂದ, ಸದರಿ ಸಹಿಗಳನ್ನು ಕ್ರಮವಾಗಿ ನಿಪಿ-11(ಬಿ), ನಿಪಿ-12(ಬಿ) ಮತ್ತು ನಿಪಿ-13(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ-14 ರ ಮೇಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿರುವುದರಿಂದ, ಸದರಿ ಸಹಿಯನ್ನು ನಿಪಿ-14(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ15 ಫೋಟೋವನ್ನು ನೋಡಿ ಅದು ಚಾಸಾ-1 ರವರ ಫೋಟೋ ಆಗಿರುತ್ತದೆ ಎಂದು ನುಡಿಯುತ್ತಾರೆ. ಸಾಕ್ಷಿಯು ನಿಪಿ16 ಮತ್ತು 17 ರ ಫೋಟೋಗಳನ್ನು ನೋಡಿ ಅವುಗಳು ಚಾಸಾ-3 ರವರ ಫೋಟೋಗಳಾಗಿರುತ್ತದೆ ಎಂದು ನುಡಿಯುತ್ತಾರೆ.

5. ಈಗ ಸಾಕ್ಷಿಯು ಪ್ರಥಮ ವರ್ತಮಾನ ವರದಿಯನ್ನು ನೋಡಿ ಅದರ ಮೇಲಿರುವ ತನ್ನ ಡಿಜಿಟಲ್ ಸಹಿಯನ್ನು ನೋಡಿ ಗುರುತಿಸಿರುವುದರಿಂದ, ಸದರಿ ದಾಖಲೆಯನ್ನು ನಿಪಿ-19 ಎಂದು ಗುರುತಿಸಲಾಯಿತು. ಸಾಕ್ಷಿಯು ಹೆಸ್ಕಾಂ ರವರು ನೀಡಿರುವ ಪತ್ರದ ಮೇಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿರುವುದರಿಂದ, ಸದರಿ ದಾಖಲೆಯನ್ನು ನಿಪಿ-20 ಮತ್ತು ಸಹಿಯನ್ನು ನಿಪಿ-20(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಪಿಡಿಓ, ಗ್ರಾಮ ಪಂಚಾಯತ್, ಹುನ್ನೂರು ಇವರು ನೀಡಿರುವ ಧೃಢೀಕರಣ ಪತ್ರದ ಮೇಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿರುವುದರಿಂದ, ಸದರಿ ದಾಖಲೆಯನ್ನು ನಿಪಿ-21 ಮತ್ತು ಸಹಿಯನ್ನು ನಿಪಿ-21(ಎ) ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದಿರುವ ಎಂ.ಓ-1 ಮತ್ತು 2 ಗಳನ್ನು ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ.

(ಈಗ ನ್ಯಾಯಾಲಯದ ಸಮಯ ಮಧ್ಯಾಹ್ನ 2.00 ಗಂಟೆ ಆಗಿರುವುದರಿಂದ ಸಾಕ್ಷಿಯ ಪಾಟೀ ಸವಾಲನ್ನು ಮಧ್ಯಾಹ್ನಕ್ಕೆ ಮುಂದೂಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೆ. ಸರಿ ಅದೆ.

RAJASHEKHAR Digitally signed by RAJASHEKHAR
Date: 2026.02.17 18:38:20 +0530

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ಹಾಗೂ ಜೆ.ಎಮ್.ಎಫ್.ಸಿ. ಜಮಖಂಡಿ.

<u>ದಿನಾಂಕ **17.02.2026** ರಂದು ಮಧ್ಯಾಹ್ನ ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.</u>

<u>ಪಾಟೀ ಸವಾಲುಃ ಆರೋಪಿತರ ಪರ ಶ್ರೀ.ಎನ್ ಬಿ ಜಿ ವಕೀಲರಿಂದಃ-</u>

1. ದಿನಾಂಕ 17.07.2021 ರಂದು ರಾತ್ರಿ 8.00 ಗಂಟೆಯಿಂದ ದಿನಾಂಕ 18.07.2021 ರಂದು ಬೆಳಿಗ್ಗೆ 8.00 ಗಂಟೆಯವರೆಗೆ ನಾನು ಆ ದಿನ ಕರ್ತವ್ಯದಲ್ಲಿ ಇದ್ದೆ. ಘಟನೆ ನಡೆದ ಸಮಯದಲ್ಲಿ ಬೀಟ್ ಡ್ಯೂಟಿ ಇದ್ದ ಪೋಲಿಸರಿಂದ ಘಟನೆಯ ಬಗ್ಗೆ ನನಗೆ ಮಾಹಿತಿ ಬಂದಿಲ್ಲ.

ಸಾರ್ವಜನಿಕರು ಘಟನೆಯ ಬಗ್ಗೆ ತಿಳಿಸಿಲ್ಲ, ಚಾಸಾ-1 ರವರು ಬಂದು ಘಟನೆಯ ಬಗ್ಗೆ ತಿಳಿಸಿರುತ್ತಾರೆ. ಚಾಸಾ-1 ರವರು ಬೆಳಗಿನ ಜಾವ 3.15 ಗಂಟೆಗೆ ಪೋಲಿಸ್ ಠಾಣೆಗೆ ಬಂದಿರುತ್ತಾರೆ. ಚಾಸಾ-1 ರವರು ಘಟನೆಯಾದ ಸಮಯದ ಬಗ್ಗೆ ನನಗೆ ಹೇಳಿರುತ್ತಾರೆ. ರಾತ್ರಿ 10.30 ರಿಂದ 11.30 ಗಂಟೆ ನಡುವೆ ಘಟನೆಯಾಗಿರುವ ಬಗ್ಗೆ ನನಗೆ ಚಾಸಾ-1 ರವರು ತಿಳಿಸಿರುತ್ತಾರೆ. ವಾಹನ ಸೌಕರ್ಯ ಇರದೇ ಇರುವುದರಿಂದ ಚಾಸಾ-1 ರವರು ಬೆಳಗಿನ ಜಾವ 3.15 ಗಂಟೆಗೆ ಬಂದು ದೂರು ನೀಡಿರುವುದಾಗಿ ಹೇಳಿರುತ್ತಾರೆ.

2. ಆ ದಿನ ಚಾಸಾ-1 ರವರ ಜೊತೆ ಅವರ ತಾಯಿ ಸಹ ಬಂದಿದ್ದರು. ಚಾಸಾ-1 ರವರು ದಸ್ತೂರುರವರಾದ ಪಿ. ಎ. ಕುಳ್ಳೊಳ್ಳಿ ಇವರ ಮೂಲಕ ದೂರನ್ನು ಬರೆಸಿ ನನ್ನ ಮುಂದೆ ಸಲ್ಲಿಸಿರುತ್ತಾರೆ. ಚಾಸಾ-1 ಮತ್ತು ಅವರ ತಾಯಿ ಬಂದ 5 ನಿಮಿಷಕ್ಕೆ ದೂರಿನ ದಸ್ತೂರುರವರು ಬಂದಿರುತ್ತಾರೆ. ಚಾಸಾ-1 ರವರು ದೂರನ್ನು ಕೊಟ್ಟಾದ ನಂತರ ಅವರನ್ನು ಆಸ್ಪತ್ರೆಗೆ ಕಳುಹಿಸಿರುತ್ತೇನೆ. ದೂರನ್ನು ತೆಗೆದುಕೊಂಡ ನಂತರ ಚಾಸಾ-1 ರವರನ್ನು ಆಸ್ಪತ್ರೆಗೆ ಕಳುಹಿಸಿರುತ್ತೇನೆ. ನಾನು ಚಾಸಾ-1 ರವರನ್ನು ಆಸ್ಪತ್ರೆಗೆ ಕಳುಹಿಸಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

3. ಪಂಚರನ್ನು ಬೀಟ್ ಪೋಲಿಸರು ಕರೆದುಕೊಂಡು ಬಂದಿದ್ದರು. ನಾನು ಪಂಚರ ಸಮಕ್ಷಮ ಸ್ಥಳ ಪಂಚನಾಮೆ ಮಾಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಪಂಚನಾಮೆ ಸಮಯದಲ್ಲಿ ಗಾಜಿನ ಬಳೆಯ ಚೂರುಗಳನ್ನು ಮತ್ತು ನೂಲಿನ ಹಗ್ಗವನ್ನು ಜಪ್ತಿಪಡಿಸಿಕೊಂಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಬಳೆಯ ಚೂರು ಮತ್ತು ನೂಲಿನ ಹಗ್ಗ ಜಪ್ತಿಪಡಿಸಲಾಗಿದೆ ಎಂದು ತೋರಿಸಲು ಫೋಟೋಗಳನ್ನು ತೆಗೆಸಿಲ್ಲ. ನಾನು ಫೋಟೋಗಳನ್ನು ನಮಗೆ ಅನುಕೂಲವಾಗುವಂತೆ ಸೃಷ್ಟಿ ಮಾಡಿ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ನಿಪಿ-15 ರಿಂದ 17 ಫೋಟೋಗಳನ್ನು ಎಲ್ಲಿ ತೆಗೆಯಲಾಗಿದೆ ಎಂದು ನನಗೆ ಸರಿಯಾಗಿ ನೆನಪಿಲ್ಲ. ನಿಪಿ-9 ಮತ್ತು 10 ಫೋಟೋಗಳನ್ನು ಪೋಲಿಸ್ ಠಾಣೆಯಲ್ಲಿ ತೆಗೆಯಲಾಗಿರುತ್ತದೆ. ನಾನು ಅದೇ ದಿನ ಚಾಸಾ-1 ರವರ ಪುರವಣಿ ಹೇಳಿಕೆ ಪಡೆದಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಚಾಸಾ-9 ರವರಿಂದ ಗಾಯದ ಪ್ರಮಾಣ ಪತ್ರ ಪಡೆದಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ-3 ರಿಂದ 8 ರವರ ಹೇಳಿಕೆಗಳನ್ನು ದಾಖಲಿಸಿಕೊಂಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಘಟನೆಯಾದ ದಿನ

ವಿದ್ಯುತ್ ಸಂಪರ್ಕ ಇದ್ದ ಬಗ್ಗೆ ಮಾಹಿತಿ ನೀಡಲು ನಾನು ಲಿಖಿತ ಅರ್ಜಿ ಮೂಲಕ ಸಂಬಂಧಪಟ್ಟ ಇಲಾಖೆಗೆ ಕೇಳಿದ್ದೆ, ಅದರ ಪ್ರತಿಯನ್ನು ಹಾಜರುಪಡಿಸಿರುತ್ತೇನೆ. ನಾನು ಲಿಖಿತ ಅರ್ಜಿ ಸಲ್ಲಿಸಿದ್ದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಪಿ.ಡಿ.ಓ ರವರಿಗೆ ಲಿಖಿತ ಅರ್ಜಿ ಸಲ್ಲಿಸಿ ಮಾಹಿತಿ ನೀಡುವಂತೆ ಕೇಳಿದ್ದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

4. ಚಾಸಾ-4 ರವರು ರಾಯಚೂರಿನಿಂದ ಚಾಸಾ-1 ರವರ ಮನೆಗೆ ಬಂದಿದ್ದರು, ಮರಳಿ ಹೋಗಲು ಬಸ್ ಇರದೇ ಇದ್ದುದ್ದರಿಂದ ಚಾಸಾ-1 ರವರ ಮನೆಯಲ್ಲಿ ಉಳಿದುಕೊಂಡಿದ್ದರು. ಆರೋಪಿತರಿಗೆ ನೋಟೀಸ್ ನೀಡಿದ ಬಗ್ಗೆ ದಾಖಲೆಗಳನ್ನು ನಾನು ಹಾಜರುಪಡಿಸಿರುತ್ತೆನೆ. ನಾನು ಆರೋಪಿತರಿಗೆ ನೋಟೀಸ್ ನೀಡಿ ನಂತರ ವಿಚಾರಿಸಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ-1 ರವರು ನೀಡಿರುವ ಸುಳ್ಳು ದೂರಿಗೆ ಅನುಕೂಲವಾಗುವಂತೆ ನಾನು ಸುಳ್ಳು ದಾಖಲೆಗಳನ್ನು ಸೃಷ್ಟಿಸಿ, ಸುಳ್ಳು ದೋಷಾರೋಪಣಾ ಪಟ್ಟಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ತನಿಖೆಯಲ್ಲಿ ಆರೋಪಿತರು ಯಾವುದೇ ಅಪರಾಧ ಮಾಡದೇ ಇರುವುದು ನನಗೆ ಕಂಡು ಬಂದಿದ್ದರೂ ಸಹಿತ, ನಾನು ಅವರ ವಿರುದ್ಧ ಸುಳ್ಳು ದೋಷಾರೋಪಣಾ ಪಟ್ಟಿ ಸಲ್ಲಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ**.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೆ. ಸರಿ ಅದೆ.

RAJASHEKHAR

Digitally signed by RAJASHEKHAR
Date: 2026.02.17 18:38:28 +0530

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ಹಾಗೂ ಜೆ.ಎಮ್.ಎಫ್.ಸಿ. ಜಮಖಂಡಿ.